ಹಾಗೂ ಸಣವ್ವಳ ದೃಷ್ಟಿಯೂ ಎಲೆಯ ಅಂಜನದ ಭಾಗದ ಕಡೆಗೆ ಹೋಯಿತು.

'ಉತ್ತರ ದಿಕ್ಕಿನ ಕಡೆಗೆ ಹೋಗ್ಯಾವ ದನಾ' ರಾಮಪ್ಪ ಅಂಜನಾ ಹೇಳಲು ಶುರು ಮಾಡಿದ.

ನಿಂಗಪ್ಪ ತನ್ನ ಹೊಲದ ಉತ್ತರ ದಿಕ್ಕು ಯಾವ ಕಡೆ ಬರುತ್ತದೆಂದು ತಲೆ ಕೆಡಿಸಿಕೊಳ್ಳತೊಡಗಿದ. 'ಆಕಳ ಒರ್‍ಯಾಡಕತ್ತತೀ ನೋಡಿಲ್ಲೆ' ಎಂದು ತೋರಿಸಿದ. ನಿಂಗಪ್ಪ ನೋಡಿದ ಏನೊಂದು ಕಾಣಲಿಲ್ಲ. ಕಣ್ಣರಳಿಸಿ ನೋಡಿದ ಕಪ್ಪನೆ ಡಾಂಬರು ಬಿಟ್ಟರೆ ಏನನ್ನು ಗುರುತಿಸಲಾಗಲಿಲ್ಲ. ಮಂಡಿಗಾಲ್ಲಿ ಕೂತಿದ್ದ ಸಣವ್ವಳೂ ನೆಲಕ್ಕೆ ಕೈವೂರಿ ಮುಂದೆ ಬಾಗಿ ನೋಡಿದಳು. 'ಏ ಸರಕಳವಾ ಹಿಂದಕಾ ನಿನಗೇನ್ ಕಾಣತತಿ' ಸಣವ್ವಳನ್ನು ಹಿಂದಕ್ಕೆ ಸರಿಸಿದ. ಆಕೆಗೂ ಏನೂ ಕಾಣಲಿಲ್ಲ. 'ದನ ಮೇವಿಲ್ಲದ ಹೆಂಗ್ ಹೊಟ್ಟಿ ಸಣ್ಣಕಾಗ್ಯಾವ್ ನೋಡಿಲ್ಲೆ ಆಹಾಹಾ ಕಳ್‌ಸೂಳೆಮಕ್ಕಳು... ಹೆಂಗ್ ಕುಂತಾರ್ ನೋಡು' ಎಂದು ನಿಂಗಪ್ಪನ ಕರುಣೆ ಗಿಟ್ಟಿಸಲು ಮುಂದಾದ.

'ಕುಡ್ಕಂತ್ ಮನಿ ಒಳಾಗ ಕಟ್ಟಿ ಹಾಕ್ಯಾಂಡಾರ ದನಾನ. ಇನ್ನೊಂದು ವಾರೊಪ್ಪತ್ತು ತಡದು ಕಸಾಯಿ ಖಾನಿಗೆ ಒಯ್ತಾರಣಾ ನಿನ್ನ ಮುತ್ತಿನಂತಾ ದನನಾ' ಎಂದು ಬುಗಿಲು ಹುಟ್ಟಿಸಿದ. ರಾಮಪ್ಪ 'ಏಏಏ ಬ್ಯಾಡ್ರಿ ದನಾ ಎಲ್ಲಿದಾವು ಹೇಳ್ರಿ ನಾ ಅವರ್ ಕಾಲರ ಹಿಡದು ಹೊಡಕೊಂಡ್ ಬರ್‍ತೀನಿ' ಎಂದ ನಿಂಗಪ್ಪ.

ರಾಮಪ್ಪನಿಗೆ ಇದ್ಯಾಕೊ ಗಿಟ್ಟೋ ಪಾರ್ಟಿಯಲ್ಲ ಎಂದೆನಿಸಿ, 'ಅವಸರ ಮಾಡಬ್ಯಾಡಪಾ ನಿಂಗಪ್ಪ. ಅದು ಅಷ್ಟ್ ಹಗರಕ್ ಆಗೋ ಕೆಲಸಾ ಅಲ್ಲ. ಸ್ವಲ್ಪ ಎಚ್ಚರ ತಪ್ಪಿದ್ರುನೂ ಮುತ್ತಿನಂತಾ ನಿನ್ನ ದನಗೋಳು ಕೈ ತಪ್ಪಿ ಹೋಕ್ಕಾವು' ಎಂದು ಪೇಚಿಗೆ ಸಿಲುಕಿಸಿದ.

'ಉತ್ರ್ ದಿಕ್ಕಿನ ಕಡೆ ಪಚ್ಚಿಮಕ್ ಮಕಾ ಮಾಡಿರೋ ಮನಿ ಹಿತ್ತಲದ್ ಕೊಟ್ಟಿಗ್ಯಾಗ ನಿನ್ ದನಾ ಅದಾವು. ವಾರೊಪ್ಪತ್ತಿನ್ಯಾಗ ಸಿಕ್ಕಿದ್ರ ಸಿಗತಾವು ಇಲ್ಲಾ ಸಂತಿಗರ ಕಸಾಯಿಖಾನಿಗರಾ ಹೋಕಾವ್ ನೋಡು' ಎಂದ ರಾಮಪ್ಪ. 'ಅಲ್ಲಾ ನೀವ್ ಹಿಂಗ್ ದಿಕ್ಕು ಪಕ್ಕು ವಾರೊಪ್ಪತ್ತು ಅಂದ್ರ ಎಲ್ಲೆಂತ ಹುಡುಕದು? ಇಲ್ಲಿಲ್ಲೆ ಇಂತಿಂತಾರ ಇವರ ಮನ್ಯಾಗ ಅದಾವ್ ಅಂತ ಹೇಳ್ತೀರಂತ ಬೀರಪ್ಪ ಹೇಳಿ ಕಳಿಸ್ಯಾನ. ನಿಮ್ಮ ಪಾದಕ್ ಬಿದ್ರ ದನಾ ಸಿಗ್ತಾವು ಹೋಗಿ ಬಾ ಅಂತಾ. ಅಲ್ಲಾ ನೀವ ಏನಾರ ದಾರಿ ತೋರಿಸಬಕು ಹಂಗ್ ಮಾಡಬ್ಯಾಡ್ರಿ' ಎಂದು ನಿಂಗಪ್ಪ ಅಲವತ್ತುಕೊಂಡ. ರಾಮಪ್ಪನಿಗೆ ಬುಡಕ್ಕೆ ಬಂದಂಗಾಯ್ತು. 'ಇಲ್ಲಾ ನಿಂಗಪ್ಪ ಹಂಗ್ ಹೇಳಾಕ್ ಬರಲ್ಲದು ಹಿಂಗಾ ಮೊನ್ನೊಬ್ಬ ಬಂದಿದ್ದ. ಇಲ್ಲೆದ ನೋಡಂತಾ ಹೇಳಿದ್ದ ತಡಾ, ಅಂವಾ ಅವರ ಮನಿಗೆ ಹೋಗಿ ಜಗಳ ತಗ್ದು ನನ್ನ ಬುಡಕ್ಕ ತಂದಿದ್ದ. ಹಂಗೆಲ್ಲಾ ಹೇಳಾಕ ಬರಲ್ಲದು. ಪೊಲೀಸ್ ಗಿಲೀಸ್ ಅಂತಾದ್ರ ಕಷ್ಟ ಐತಿ ಬಾಳೇವು' ಅಂತಾ ನೆಪ ಹೇಳಿದ.

'ಇಲ್ಲರಿ ನಾನ್ಯಾಕ ಪೊಲೀಸು, ಜಗಳಾ ಅಂತಾ ಮಾಡಸ್ಲಿ? ನನಗ ನನ್ ದನಾ ಸಿಕ್ರ ನಾಕು ಅಕ್ಕಿಕಾಳು ಬೆಳಕಂಡು, ತಿನ್ನಕಂಡು ಬದುಕಿದ್ರ ಸಾಕು' ಹೇಳ್ರಿ ಅಂತಾ ದುಂಬಾಲು ಬಿದ್ದ ನಿಂಗಪ್ಪ. ನಿಂಗಪ್ಪ ಎಷ್ಟು ಬೇಡಿದರೂ ರಾಮಪ್ಪ ಬಾಯಿ ಬಿಡದೇ ಒಗಟಿನಲ್ಲಿ ಮಾತಾಡತೊಡಗಿದ.

ಇನ್ನು ಇವನೊಟ್ಟಿಗೆ ಹಿಂಗ್ ಮಾಡಿದರೆ ಸಮಯ ವ್ಯರ್ಥ ಎಂದು ತಿಳಿದ ನಿಂಗಪ್ಪ ಹೊರಡಲು ಅನುವಾಗಿ 'ಆತ್ರಿ ಹಂಗಾರ ನಾ ಬರ್‍ತೇನಿರಿ' ಎಂದು ನೂರು ರೂಪಾಯಿ ತೆಗೆದು ರಾಮಪ್ಪನ ಹತ್ತಿರ ಇಡಲು ಮುಂದಾದ. ಇನ್ನೊಂದೆರಡು ನೋಟು ಉದುರಿಸಲು ರಾಮಪ್ಪ, 'ದನಾ ಎಲ್ಲೂ ಹೋಗದಂಗ ಕಟ್ಟಿ ಹಾಕಂಗ್ ಮಾಡಬಹುದು ನೋಡಪ್ಪ ಅಷ್ಟ್ರಾಗ ನೀವ್ ದನಾನ ಹುಡುಕಬಕು ಅಷ್ಟ ಮಾತ್ರ ನಾ ಮಾಡಬಲ್ಲೆ' ಎಂದು ಇನ್ನೊಂದೆರಡು ನೋಡು ಬೇಡುವಂತವನಾಗಿ ದುಡ್ಡಿನ ಕೈಗೆ ಕಣ್ಣಿಕ್ಕಿದ. 'ದುಡ್ಡು ಹೋದ್ರ ಹೋಗಲಿ ನನ್ನ ದನಾ ನನಗ ಬಂದ್ರಾತು' ಅಂತಾ ಮನದಲ್ಲಿ ಎಣಿಸಿ, ಇನ್ನೆರಡುನೂರು ರೂಪಾಯಿಗಳನ್ನು ತೆಗೆದು ಒಟ್ಟು ಮುನ್ನೂರು ರೂಪಾಯಿ ಅವನ ಬಳಿ ನಿಂಗಪ್ಪ ಇಟ್ಟ. ಸದ್ಯಕಿಷ್ಟು ಸಾಕು ಎಂಬ ಸಂತೃಪ್ತಿಯೊಂದಿಗೆ 'ನೀವೇನ್ ಚಿಂತಿ ಮಾಡಬ್ಯಾಡ್ರಿ ನಾನವರಿಗೆ ದಾರಿ ಕೊಡಂಗಿಲ್ಲ ಎಲ್ಲಾ ಬರಬ್ಬರಿ ಮಾಡತನಿ ನೀವ್ ನಿಮ್ಮ

